ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE 19/10/2019

# ಶಾಸಕ ಭೈರತಿ ಸುರೇಶ್ ಕೊಲೆ ಯತ್ನ

## ಅಪಾಯದಿಂದ ಪಾರು | ಮನೆಯಿಂದಲೇ ಚಾಕು ತಂದಿದ್ದ ಯುವಕ

ಬೆಂಗಳೂರು: ಹೆಬ್ಬಾಳ ಕ್ಷೇತ್ರದ ಶಾಸಕ ಭೈರತಿ ಸುರೇಶ್ ಅವರ ಕೊಲೆಗೆ ಯುವಕನೊಬ್ಬ ಯತ್ನಿಸಿರುವ ಆಘಾತಕಾರಿ ಘಟನೆ ಶುಕ್ರವಾರ ನಡೆದಿದೆ.



ಅನಿರೀಕ್ಷಿತ ಘಟನೆಯಿಂದ ಶಾಸಕ ಸುರೇಶ್ ಹಾಗೂ ಅವರ ಬೆಂಬಲಿಗರು ದಿಗ್ಭ್ರಾಂತಗೊಂಡಿದ್ದಾರೆ. ರಾಜಕೀಯ ವೈಷಮ್ಯ ಹಿನ್ನೆಲೆಯಲ್ಲಿ ಕೊಲೆ ಯತ್ನ ನಡೆದಿದ್ದು ಈ ಷಡ್ಯಂತ್ರದ ಹಿಂದೆ ಕಾಣದ ಕೈಗಳಿರುವ ಸಾಧ್ಯತೆಯಿದೆ ಎಂದು ಶಾಸಕರ ಬೆಂಬಲಿಗರು ಆರೋಪಿಸಿದ್ದಾರೆ.

ಕೊಲೆ ಯತ್ನ ಪ್ರಕರಣ ಸಂಬಂಧ ಶಿವು ಎಂಬಾತನನ್ನು ಬಂಧಿಸಿ ಆತನಿಂದ ಚಾಕು ಜಪ್ತಿ ಮಾಡಿಕೊಂಡಿರುವ ಕೊತ್ತನೂರು ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

**ಮನೆಯಿಂದಲೇ ಚಾಕು ತಂದಿದ್ದ:** ಆರೋಪಿ ಶಿವು ಮನೆಯಿಂದಲೇ ಚಾಕು ತಂದಿರುವುದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ. ಆದರೆ, ವಿಚಾರಣೆ ವೇಳೆ ದಾರಿಯಲ್ಲಿ ಚಾಕು ಸಿಕ್ಕಿದೆ ಎಂಬ ರೀತಿಯ ಭಿನ್ನ ಹೇಳಿಕೆಗಳನ್ನು ನೀಡುತ್ತಿದ್ದಾನೆ. ಒಮ್ಮೊಮ್ಮೆ ಘಟನೆ ಬಗ್ಗೆ ಗೊತ್ತೇ ಇಲ್ಲ ಎನ್ನುತ್ತಾನೆ. ವಿಚಾರಣೆ ಮುಂದುವರಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಶಾಸಕರ ಕೊಲೆ ಯತ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡು ಪ್ರತ್ಯೇಕ ತಂಡಗಳು ಹಲವು ಆಯಾಮಗಳಲ್ಲಿ ತನಿಖೆ ನಡೆಸುತ್ತಿವೆ. ಆರೋಪಿ ಸರಿಯಾದ ಮಾಹಿತಿ ನೀಡುತ್ತಿಲ್ಲ, ವಿಚಾರಣೆ ಮುಂದುವರಿಸಲಾಗಿದೆ ಎಂದು ಈಶಾನ್ಯ ವಿಭಾಗದ ಡಿಸಿಪಿ ಡಾ. ಭೀಮಾಶಂಕರ ಗುಳೇದ್ ತಿಳಿಸಿದರು.

**ಘಟನೆ ಅಚ್ಚರಿ ತಂದಿದೆ:** 'ಉದಯವಾಣಿ' ಜತೆ ಮಾತನಾಡಿದ ಶಾಸಕ ಭೈರತಿ ಸುರೇಶ್, ನಾನು ನೋಡಿರುವ ಸ್ಥಳೀಯ ಯುವಕ. ಮನೆ ಕಟ್ಟಲು ಕೈಲಾದಷ್ಟು ಸಹಾಯ ಮಾಡಿದ್ದೇನೆ. ಈ ಕೃತ್ಯಕ್ಕೆ ಯಾಕೆ ಮುಂದಾಗಿದ್ದಾನೆ ಎಂಬುದೇ ಆಶ್ಚರ್ಯವಾಗಿದೆ. ನನ್ನ ಮನೆಯ ಸಮೀಪವೇ ಇಂತಹ ಘಟನೆ ನಡೆದಿರುವುದು, ಇದರ ಹಿನ್ನೆಲೆ ಏನು ಎಂಬುದು ಪ್ರಶ್ನೆಯಾಗಿ ಕಾಡುತ್ತಿದೆ ಎಂದರು. ▶ 6ನೇ ಪುಟಕ್ಕೆ

### ಹೊಂಚು ಹಾಕಿದ್ದನೇ ಆರೋಪಿ?

ಆರೋಪಿ ಶಿವು ಕಳೆದ ಮೂರು ದಿನಗಳಿಂದ ಶಾಸಕರ ನಿವಾಸದ ಮನೆ ಮುಂದೆ ಹೆಚ್ಚು ಬಾರಿ ಓಡಾಡಿಕೊಂಡಿದ್ದ. ಶುಕ್ರವಾರ ಕೂಡ ಹಲವು ಬಾರಿ ಓಡಾಡಿದ್ದಾನೆ. ಎರಡು ಗಂಟೆಗಳ ಕಾಲ ಮನೆಯ ಮುಂಭಾಗದ ತಿರುವಿನಲ್ಲಿ ಕುಳಿತಿದ್ದ. ಶಾಸಕರು ಕಾರಿನಿಂದ ಹೊರಟ ತಕ್ಷಣವೇ ತನ್ನ ಬೈಕ್‌ನಲ್ಲಿ ಹೊರಟು ಕಾರಿಗೆ ಡಿಕ್ಕಿ ಹೊಡೆಸಿ ಕೊಲೆಗೆ ಯತ್ನಿಸಿದ್ದಾನೆ ಎಂದು ಸ್ಥಳೀಯರು ಆರೋಪಿಸಿದರು.

# ಶಾಸಕ ಭೈರತಿ ಸುರೇಶ್ ಕೊಲೆ ಯತ್ನ

**1ನೇ ಪುಟದಿಂದ** ▶ ಚಿಕ್ಕವಯಸ್ಸಿನಿಂದ ಶಿವುನನ್ನು ನೋಡಿದ್ದೇನೆ. ಆತನ ಮನೆಯವರು ಒಳ್ಳೆಯವರು. ಯಾಕಿಂತಹ ಕೃತ್ಯಕ್ಕೆ ಮುಂದಾಗಿದ್ದಾನೆ ಎಂಬುದು ಗೊತ್ತಾಗುತ್ತಿಲ್ಲ. ಪೊಲೀಸರ ತನಿಖೆ ನಡೆಯುತ್ತಿದೆ, ತನಿಖೆ ಬಳಿಕ ನಿಖರ ಕಾರಣದ ಇದರ ಹಿಂದೆ ಯಾರಿದ್ದಾರೆ, ಸತ್ಯಾಂಶ ಏನು ಎಂಬುದು ಗೊತ್ತಾಗಲಿದೆ ಎಂದು ಹೇಳಿದರು.

ಕ್ಷೇತ್ರದ ಜನತೆ, ಬೆಂಬಲಿಗರು, ಪಕ್ಷದ ಕಾರ್ಯಕರ್ತರು ಆತಂಕ ಪಡುವ ಅಗತ್ಯವಿಲ್ಲ, ಸಮಚಿತ್ತತೆ ಕಾಪಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

**ನಡೆದಿದ್ದೇನು?:** ಹೊಸಕೋಟೆ ಉಪಚುನಾವಣೆಯಲ್ಲಿ ಶಾಸಕ ಸುರೇಶ್ ಅವರ ಪತ್ನಿ ಪದ್ಮಾವತಿ ಸುರೇಶ್ ಕಾಂಗ್ರೆಸ್ ಸಂಭಾವ್ಯ ಅಭ್ಯರ್ಥಿಯಾಗಿದ್ದು ಕ್ಷೇತ್ರದಲ್ಲಿ ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಶುಕ್ರವಾರ ಮಧ್ಯಾಹ್ನ 12. 10ರ ಸುಮಾರಿಗೆ ಶಾಸಕರು ತಮ್ಮ ಕಾರಿನಲ್ಲಿ ಹೊಸಕೋಟೆಗೆ ತೆರಳಲು ಮನೆಯಿಂದ 100 ಮೀಟರ್ ತೆರಳುತ್ತಿದ್ದಂತೆ ಹಿಂದೆ ಬೈಕ್‌ನಲ್ಲಿ ಆಗಮಿಸಿದ ಶಿವ, ಅವರ ಕಾರಿಗೆ ಡಿಕ್ಕಿ ಹೊಡೆಸಿಕೊಂಡು ಹೋಗಿದ್ದಾನೆ. ಮುಂದೆ ಹೋಗಿದ್ದ ಆತ ಪುನಃ ವಾಪಸ್ ಬಂದು ಶಾಸಕರ ಕಾರಿಗೆ ಡಿಕ್ಕಿ ಹೊಡೆದಿದ್ದಾನೆ.

ಈ ವೇಳೆ ಶಾಸಕರ ಗನ್‌ಮ್ಯಾನ್ ಸತ್ಯ ಹಾಗೂ ಕಾರಿನ ಚಾಲಕ ಕೆಳಗೆ ಇಳಿದು ಆತನನ್ನು ಪ್ರಶ್ನೆ ಮಾಡಿದ್ದಾರೆ. ಸ್ಥಳೀಯ ಯುವಕ ಎಂದು ಶಾಸಕರು ಕಾರಿನಿಂದ ಇಳಿದಿದ್ದಾರೆ.

ಗನ್‌ಮ್ಯಾನ್ ಹಾಗೂ ಚಾಲಕನ ಜತೆ ಜಗಳಕ್ಕೆ ಇಳಿದ ಶಿವಕುಮಾರ್ ಹಲ್ಲೆಗೂ ಮುಂದಾಗಿದ್ದಾನೆ. ಕೂಡಲೇ ಅವರು ಆತನನ್ನು ಹಿಡಿದುಕೊಂಡಾಗ ಆತನ ಬಳಿ ಚಾಕು ಇಟ್ಟುಕೊಂಡಿರುವುದು ಗೊತ್ತಾಗಿದ್ದು ಕಿತ್ತುಕೊಂಡಿದ್ದಾರೆ. ಬಳಿಕ ಆತನನ್ನು ಪ್ರಶ್ನೆ ಮಾಡಿದರೂ ನಿಖರ ಉತ್ತರ ನೀಡುತ್ತಿಲ್ಲ. ಘಟನೆಯನ್ನು ಗಮನಿಸಿದ ಸ್ಥಳೀಯರು ಆಗಮಿಸಿದ್ದು ಆತನ ಬಳಿ ಚಾಕು ಇರುವುದನ್ನು ಗಮನಿಸಿ ಅಚ್ಚರಿಗೊಂಡಿದ್ದಾರೆ.

ಆರೋಪಿ ಶಿವು ಕೆಲಹೊತ್ತು ವಶದಲ್ಲಿಟ್ಟುಕೊಂಡು ಕೊತ್ತನೂರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ತೆರಳಿದ ಪೊಲೀಸರು ಆತನನ್ನು ಬಂಧಿಸಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

2